# ನಾಲ್ಕನೇ ಸೆಮಿಸ್ಟರ್ ಬಿ.ಎಸ್.ಸಿ./ಬಿ.ಸಿ.ಎ. ಪರೀಕ್ಷೆ, ಮೇ 2011
## (ಫ್ರೆಶರ್ಸ್ ಸ್ಕೀಂ)
## ಕನ್ನಡ ಭಾಷೆ – IV
## ಸಾಹಿತ್ಯ ಸಂವಾದ (ಭಾಗ – ೨)

ಸಮಯ : 3 ಗಂಟೆಗಳು ಗರಿಷ್ಠಾಂಕಗಳು : 90

### ಭಾಗ – ೧

I. ಅರ್ಥ ಮತ್ತು ಧ್ವನಿ ಬದಲಾಗದಂತೆ ಮೂರು ವಾಕ್ಯಗಳಿಗೆ ಬದಲಿ ವಾಕ್ಯ ರಚಿಸಿ : **(3×2=6)**

1) ಶಿಕ್ಷಣದ ನೀತಿ ಕೂಡ ಹಾಗೇ ತಪ್ಪು ಹಾದಿ ತುಳಿದಿದೆ.
2) ಎರಡೂ ಕೈಗಳು ನುಜ್ಜುಗುಜ್ಜಾಗಿ ಹುಲಿಗೆ ಚಲನೆಯೇ ಕಷ್ಟವಾಯಿತು.
3) ನಾವೂ ಆ ಪದಾರ್ಥವನ್ನು ಗಾಜಿನ ಬೀರುವಿನಲ್ಲಿ ನೋಡಿದ್ದೆವು.
4) ಕಣ್ಣುಗಳು ನೋಡುವುದು ಮನಸ್ಸು ಅವಕ್ಕೆ ನೋಡಲು ಏನನ್ನು ಕಲಿಸಿದೆಯೋ ಅದನ್ನು.

II. ಅರ್ಥವತ್ತಾದ ಕ್ರಮದಲ್ಲಿ ಮೂರು ವಾಕ್ಯಗಳನ್ನು ಪುನಾರಚಿಸಿ : **(3×2=6)**

1) ಇರುವುದಿಲ್ಲ ವೇಳೆ ಆಡಲು ಬುಡಕಟ್ಟಿನವರಿಗೆ ಜನಾಂಗದವರಿಂದ ದುಡಿಯುವ.
2) ಕೊಲ್ಲುತ್ತಿದ್ದ ಮೊದಲಿಗೆ ಮಾತ್ರ ಪ್ರಾಣಿಗಳನ್ನು ಮನುಷ್ಯ.
3) ದೇಶದಲ್ಲಿ ನಮ್ಮ ಬಿಟ್ಟಿವೆ ಕಂಪನಿಗಳು ಬಹುರಾಷ್ಟ್ರೀಯ ಬೇರು.
4) ಪಡೆದು ಹೋರಾಡಬೇಕು ಶಾಂತಿಯುತವಾಗಿ ಹಕ್ಕುಗಳನ್ನು ಕೊಳ್ಳಲು.

III. ಉಪಮೆ ಮತ್ತು ರೂಪಕಗಳನ್ನು ಬಳಸಿ ಮೂರು ಸ್ವಂತ ವಾಕ್ಯಗಳನ್ನು ರಚಿಸಿ : **(3×2=6)**

1) ಚಂದ್ರಮುಖಿ
2) ಕಮಲಾಕ್ಷಿ
3) ಹದ್ದಿನ ಕಣ್ಣು
4) ಕತ್ತೆಯಂತೆ ಅರಚು.

IV. ಮೂರು ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ರಚಿಸಿ : **(3×2=6)**

1) ತಲೆಕೊಡು
2) ಕಾಲುಕೆರಿ
3) ಬಾಲ ಕತ್ತರಿಸು
4) ಬೇರು ಬಿಡು.

P.T.O.

www.onlinebu.com

V. ಎರಡು ಗಾದೆ ಮಾತುಗಳನ್ನು ವಿಸ್ತರಿಸಿ ಬರೆಯಿರಿ : (2×3=6)

1) ತುಂಬಿದ ಕೊಡ ತುಳುಕುವುದಿಲ್ಲ.

2) ಬೆಣ್ಣೆಯಲ್ಲಿ ಕೂದಲು ತೆಗೆ.

3) ಪೇಟೆಯಲ್ಲಿರೋನ್ಗೆ ಬೇಟೆ ಸುದ್ದಿಯಾಕೆ ?

4) ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ

## ಭಾಗ – ೨

VI. ನಾಲ್ಕು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ : (4×5=20)

1) ದೇಶದ ಆರ್ಥಿಕ ಮತ್ತು ರಾಜಕೀಯ ಸ್ಥಿತಿಗಳು ಕ್ರೀಡೆಯಲ್ಲಿನ ಸೋಲುಗೆಲುವಿಗೆ ಕಾರಣವಾಗಿದೆಯೆ ?

2) 'ಕಾಳಿಂಗ ಕ್ರೀಡೆ' ಕವಿತೆಯಲ್ಲಿ ಪು.ತಿ.ನ. ವಿವರಿಸುವ ಕ್ರೀಡೆಯ ಸ್ವರೂಪ.

3) ಲೇಖಕರಿಗಾದ ಬೇಟೆಯ ಅನುಭವಗಳೇನು ?

4) ಅಭಿವೃದ್ಧಿಯನ್ನು ಕುರಿತು ಅಮರ್ತ್ಯಸೇನರ ವಿಚಾರಗಳೇನು ?

5) ಈಜು ಕಲೆಯ ಸಾಹಸವನ್ನು ಅಮೇರಿಕನ್ನರಿಗೆ ಲೇಖಕರು ಪರಿಚಯಿಸಿದ ಬಗೆ.

6) ಕಪ್ಪು ವರ್ಣೀಯರ ಮೇಲಿನ ದಬ್ಬಾಳಿಕೆಗೆ ಕಾರಣಗಳೇನು ?

## ಭಾಗ – ೩

VII. ಎರಡು ಪ್ರಶ್ನೆಗಳಿಗೆ ವಿವರಣಾತ್ಮಕ ಉತ್ತರ ಬರೆಯಿರಿ : (2×10=20)

1) 'ಹಣದ ಹುಚ್ಚು' ಕವಿತೆ ವ್ಯಕ್ತಪಡಿಸುವ ಸಾಮಾಜಿಕ ಕಳಕಳಿಯ ಸ್ವರೂಪವೇನು ?

2) 'ಬೀಜ ಸಂಕರದ ಕ್ರಿಯೆ' ಎಂದರೇನು ? ವಿವರಿಸಿ.

3) ಅಂಬೇಡ್ಕರ್‌ರವರ ಹೋರಾಟದ ಕೆಚ್ಚು 'ಮಹಡ್‌ಕೆರೆಯ ಪ್ರಸಂಗ' ಭಾಗದಲ್ಲಿ ಹೇಗೆ ಮೂಡಿ ಬಂದಿದೆ ? ವಿವರಿಸಿ.

## ಭಾಗ – ೪

VIII. ಎರಡು ಪ್ರಶ್ನೆಗಳಿಗೆ ವಿಮರ್ಶಾತ್ಮಕ ಉತ್ತರ ಬರೆಯಿರಿ : (2×10=20)

1) ಸ್ವದೇಶಿ ಮತ್ತು ವಿದೇಶಿ ಕಂಪನಿಗಳ ಬಗೆಗೆ ಲೇಖಕರ ಅಭಿಪ್ರಾಯಗಳನ್ನು "ಬಹುರಾಷ್ಟ್ರೀಯ ಕಂಪನಿಗಳು ....." ಪಠ್ಯದ ಹಿನ್ನೆಲೆಯಲ್ಲಿ ವಿಚಾರಮಾಡಿ.

2) ಅಮೇರಿಕಾದ ದರ್ಪವನ್ನು ಸಹಿಸಿಕೊಳ್ಳಬೇಕಾದ ದುರ್ಬಲ ರಾಷ್ಟ್ರಗಳ ಸ್ಥಿತಿಯನ್ನು "ಅಮೇರಿಕಾ ಅಮೇರಿಕಾ" ಕವಿತೆ ಹೇಗೆ ವ್ಯಕ್ತ ಪಡಿಸುತ್ತದೆ ? ವಿವರಿಸಿ.

3) ಧಾರ್ಮಿಕ ಮೌಢ್ಯವನ್ನು ಕುರಿತ ವಿಡಂಬನೆ 'ದೇವರು–ಪೂಜಾರಿ' ಕವಿತೆಯಲ್ಲಿ ಹೇಗೆ ಮೂಡಿ ಬಂದಿದೆ ?

---

http://www.onlinebu.com http://www.onlinebu.com
www.onlinebu.com

# ನಾಲ್ಕನೇ ಸೆಮಿಸ್ಟರ್ ಬಿ.ಎಸ್.ಸಿ./ಬಿ.ಸಿ.ಎ. ಪರೀಕ್ಷೆ, ಮೇ 2011
## (ರಿಪೀಟರ್ಸ್ ಸ್ಕೀಂ)
## ಕನ್ನಡ ಭಾಷಾ ಪತ್ರಿಕೆ – IV
## ವೆನಿಸಿನ ವರ್ತಕ ಮತ್ತು ಬೆಕ್ಕಿನ ಕಣ್ಣು

ಸಮಯ : 3 ಗಂಟೆಗಳು ಗರಿಷ್ಠಾಂಕಗಳು : 90

I. ಅ) ಒಂದು ಭಾಗದ ಭಾವಾರ್ಥವನ್ನು ಬರೆಯಿರಿ : **(1×5=5)**

1) ಹಾಗಾದರೆ ತಕ್ಷಣವೇ ವಕೀಲರ ಬಳಿ ಕಾಣಿ ನನ್ನನ್ನ,
ಆತನಿಗೆ ಈ ತಮಾಷೆ ಕರಾರಿನ ಬಗ್ಗೆ ತಿಳುವಳಿಕೆ ನೀಡಿ
ಈಗಲೇ ಹೋಗಿ ಆ ಡಕೆಟುಗಳನ್ನು ತುಂಬಿ ಬರುತ್ತೇನೆ.
ಚೀಲದಲ್ಲಿ ಬೇಜವಾಬ್ದಾರಿ ಸೇವಕನ ಭೀತ ರಕ್ಷಣೆಯಲ್ಲಿರುವ
ನನ್ನ ಮನೆ ನೋಡಿ ಬೇಗ ನಿಮ್ಮ ಕೂಡಿಕೊಳ್ಳುತ್ತೇನೆ.

2) "ಹೊರ ನೋಟದಿಂದೆ ಆಯ್ಕೆ ಮಾಡದಾತನೆ,
ನೀ ಅದೃಷ್ಟಶಾಲಿಯಾಗು, ಸತ್ಯವಂತನೆ,
ಈ ಭಾಗ್ಯ ತಾನೇ ನಿನಗೆ ಬಂತು,
ಸಂತುಷ್ಟನಾಗು, ಹುಡುಕಬೇಡ ಹೊಸತು,
ಇದರಿಂದಲೆ ನಿನಗೆ ಸಂತೃಪ್ತಿಯಾದರೆ
ಈ ಭಾಗ್ಯ ನಿನಗೆ ಆನಂದ ತಂದರೆ
ತಿರುಗು ನೀನು ನಿನ್ನ ನಲ್ಲೆ ಇರುವೆಡೆ
ಪ್ರೀತಿ ಮುತ್ತಿನಿಂದ ಅವಳ ನೀ ಪಡೆ"

ಆ) ಮೂರನ್ನು ಸಂದರ್ಭ ಸಹಿತ ವಿವರಿಸಿ : **(3×3=9)**

1) ನನ್ನ ಬದಲಿಸುವ ಶಕ್ತಿ ಯಾವ ನರನಾಲಿಗೆಗೂ ಇಲ್ಲ.
2) ಆಯಿತು, ಷೈಲಾಕ್, ನಾನೀ ಕರಾರಿಗೆ ರುಜು ಮಾಡುತ್ತೇನೆ.
3) ಹಾಗಾದರೆ ನೀ ಪ್ರೇಮದಲ್ಲಿ ಸಿಲುಕಿರಬೇಕು.
4) ನೀ ಏಕೆ ನಿನ್ನ ಚೂರಿಯನ್ನಷ್ಟು ತೀವ್ರ ಮಸೆಯುತ್ತಿರುವೆ ?
5) ಸವಿ ಸಂಗೀತ ಕೇಳುವಾಗ ನಾ ಎಂದೂ ಹರ್ಷವಾಗಿರಲಾರೆ.

ಇ) ಮೂರು ವಿಷಯಗಳಿಗೆ ಟಿಪ್ಪಣಿ ಬರೆಯಿರಿ : **(3×2=6)**

ಷೇಕ್ಸ್‌ಪಿಯರ್, ಭಗವಾನ್, ಜೇಸನ್, ಡಕೆಟ್

www.onlinebu.com

II. ನಾಲ್ಕು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ : (4×5=20)

1) ಆಂಟೋನಿಯನನ್ನು ಷೈಲಾಕ್ ದ್ವೇಷಿಸಿದ್ದೇಕೆ ?

2) 'ಜನಿಕ'ಳ ಪಾತ್ರ ಪರಿಚಯ ಮಾಡಿ.

3) ಷೈಲಾಕ್ ಕರಾರು ಪತ್ರವನ್ನೇಕೆ ಬರೆಸಿಕೊಂಡ ?

4) ಪೋರ್ಷಿಯಾ ಮತ್ತು ನಿರಿಸ ಇವರ ತುಂಟಾಟ ಬಯಲಾದ ಸಂದರ್ಭವನ್ನು ವಿವರಿಸಿ.

5) ಕರಂಡಕಗಳ ಆಯ್ಕೆಯ ಸಂದರ್ಭದಲ್ಲಿ ಆರಗಾನ್ ರಾಜಕುಮಾರನ ಆತ್ಮ ಪ್ರತಿಷ್ಠೆ ಹೇಗೆ ವ್ಯಕ್ತವಾಗಿದೆ ?

III. **ಎರಡು** ಪ್ರಶ್ನೆಗಳಿಗೆ ವಿವರವಾದ ಉತ್ತರ ಬರೆಯಿರಿ : (2×10=20)

1) ವೆನಿಸಿನ ವರ್ತಕ ನಾಟಕದ ಆಶಯವೇನು ?

2) ನಿರಿಸಳ ಪಾತ್ರ ಪರಿಚಯ ಮಾಡಿಕೊಡಿ.

3) ಆಂಟೋನಿಯೋನ ವಿಷಯದಲ್ಲಿ ದ್ವೇಷ ಸಾಧಿಸಲು ಹೊರಟ ಷೈಲಾಕನು ಬೇಸ್ತುಬಿದ್ದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ.

4) ಆಂಟೋನಿಯೋಗೆ ಬಂದ ದುಸ್ಥಿತಿ ಯಾವುದು ? ಆದರಿಂದ ಹೊರಬಂದ ಬಗೆಯನ್ನು ವಿವರಿಸಿ.

IV. **ಐದು** ಪ್ರಶ್ನೆಗಳಿಗೆ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿ : (1×5=5)

1) ಬೆಕ್ಕಿನ ಕಣ್ಣು ಕಾದಂಬರಿಯ ಲೇಖಕಿ ಯಾರು ?

2) ಕಾದಂಬರಿಯಲ್ಲಿ ಬರುವ ಎರಡು ಪ್ರಾಣಿಗಳು ಯಾವುವು ?

3) ಪದ್ಮಳ ಕಣ್ಣು ಯಾರ ಕಣ್ಣನ್ನು ಹೋಲುತ್ತಿತ್ತು ?

4) ರಾಜಮ್ಮನಿಗೆ ಮದುವೆಯಾಗಿ ಎಷ್ಟು ವರ್ಷ ಮಕ್ಕಳಿರಲಿಲ್ಲ ?

5) ಹಿರಿಯರ ಪಾಲಿಗೆ ಕುಸುಮ ಹೇಗಿದ್ದಳು ?

6) ಹುಚ್ಚಾಸ್ಪತ್ರೆಗೆ ಬರುವ ಸಾವಿತ್ರಮ್ಮ ಮೊದಲು ಏನಾಗಿದ್ದಳು ?

7) ಡಾಕ್ಟರ್ ಕುಸುಮಾಳಿಗೆ ನೀಡಿದ ಪರೀಕ್ಷೆ ಯಾವುದು ?

V. **ಒಂದು** ವಿಷಯದ ಬಗ್ಗೆ ಟಿಪ್ಪಣಿ ಬರೆಯಿರಿ : (1×5=5)

1) ಕುಸುಮಳ ಬಾಲ್ಯ ಜೀವನ.

2) ರಾಜಶೇಖರನ ವ್ಯಕ್ತಿತ್ವ.

VI. **ಎರಡು** ಪ್ರಶ್ನೆಗಳಿಗೆ ವಿವರವಾದ ಉತ್ತರ ಬರೆಯಿರಿ : (2×10=20)

1) ಪದ್ಮಾಳ ಆಗಮನದಿಂದ ಕುಸುಮಳ ಬದುಕಿಗೆ ಬಂದ ತಿರುವೇನು ?

2) ಕುಸುಮಳ ಮನೋವೈಪರೀತ್ಯಕ್ಕೆ ಕಾರಣಗಳೇನು ?

3) ಲಕ್ಷ್ಮಣರಾಯ, ರಾಜಮ್ಮ, ಜಗನ್ನಾಥರಾಯ ಇವರಲ್ಲಿ ಒಬ್ಬರ ಪಾತ್ರ ಪರಿಚಯ ಮಾಡಿಕೊಡಿ.

4) ಬೆಕ್ಕಿನ ಕಣ್ಣು ಶೀರ್ಷಿಕೆಯನ್ನು ಕುರಿತು ವಿವರಿಸಿ.

---

http://www.onlinebu.com www.onlinebu.com http://www.onlinebu.com